ಕಥೆ

# ಜೀವನ ನಿಂತ ನೀರಲ್ಲ

■ ಸಿ.ಎನ್. ಮುಕ್ತಾ
ಕಲೆ: ಶಿಲ್ಪಾ ಕಬ್ಬಿಣಕಂತಿ

ಡೈನಿಂಗ್ ಟೇಬಲ್ ಮೇಲೆ ಪ್ಲೇಟ್‌ಗಳನ್ನಿಟ್ಟು ಬೃಂದಾ ಕೂಗಿದಳು, 'ತಿಂಡಿಗೆ ಬನ್ನಿ'.

ಅಮ್ಮಾ ಏನು ತಿಂಡಿ? ಸಿಂಧು ಕೇಳಿದಳು. ಸುಹಾಸ್, ಮಕ್ಕಳಿಬ್ಬರು ಬಂದರೂ ಪವನ್ ಬರಲಿಲ್ಲ. ಸುಹಾಸ್ ಪಪ್ಪ ರೂಂನಲ್ಲಿರಬೇಕು. ಕರೆದುಕೊಂಡು ಬಾ. ಅಷ್ಟರಲ್ಲಿ ಪವನ್ ಆಗಮಿಸಿದ. ಬಿಸಿಬಿಸಿ ಅವರೇಕಾಳು ಉಪ್ಪಿಟ್ಟು, ಸಜ್ಜಿಗೆ ಬಡಿಸಿದಳು ಬೃಂದಾ.

ಅಮ್ಮ, ಇದೇನಾ ಸಂಡೆ ಸ್ಪೆಷಲ್? ಬೇಗ ತಿಂಡಿ ತಿಂದು ರೆಡಿಯಾಗಿ ಇವತ್ತು ಶಾಪಿಂಗ್ ಇದೆ, ಮರೆತು ಬಿಟ್ರಾ?

ಓ ಹಬ್ಬದ ಶಾಪಿಂಗ್! ಅಮ್ಮ, ನನಗೆ ಎರಡು ಡ್ರೆಸ್ ಬೇಕು. ಅಮ್ಮಾ ನನಗೂ... ಎಂದ ಮಗ.

ಆಗಲಿ ಕೊಡಿಸೋಣ. ಶಾಪಿಂಗ್ ಮುಗಿಸಿ, ಹೋಟೆಲ್‌ನಲ್ಲಿ ಊಟ ಮಾಡಿಕೊಂಡು ಬರೋಣ. ತಾಯಿ–ಮಕ್ಕಳು ಮಾತನಾಡುತ್ತಿದ್ದರೂ ಪವನ್ ಯಾವ ಉತ್ಸಾಹವನ್ನೂ ತೋರಿಸದೆ ಸುಮ್ಮನೆ ಕುಳಿತಿದ್ದ. ಮಕ್ಕಳು ಬೇಗ ತಿಂಡಿ ತಿಂದು ರೆಡಿಯಾಗಲು ಹೋದರು.

ಯಾಕ್ರಿ ಒಂದು ತರಹ ಇದ್ದೀರಾ? ನಾನು ನಿನ್ನ ಜೊತೆ ಶಾಪಿಂಗ್‌ಗೆ ಬರಬೇಕಾದರೆ ಒಂದು ಕಂಡಿಷನ್ ಇದೆ.

ಕಂಡಿಷನ್ನಾ? ಏನು? ಈ ಸಲ ನಮ್ಮ ಮನೆಯ ಹಬ್ಬಕ್ಕೆ ನೀನು ನಿನ್ನ ಫ್ರೆಂಡ್ ಪ್ರತಿಮಾನ್ನ ಕರೆಯಬಾರದು.

ಯಾಕ್ರಿ ಅವಳೇನು ಮಾಡಿದಳು? ನಗುತ್ತಾ ಕೇಳಿದಳು ಬೃಂದಾ.

ಬಿಸೀರಿಯಸ್. ವರ್ಷಪೂರ್ತಿ ಎಲ್ಲಾ ಹಬ್ಬಗಳಿಗೂ ನಿನ್ನ ಫ್ರೆಂಡ್‌ನ ಕರೆಯುವ ಅವಶ್ಯಕತೆ ಏನಿದೆ? ಅವಳಿಗೆ ಬೇರೆ ಫ್ರೆಂಡ್ಸ್ ಇಲ್ವಾ? ನೀನೇ ಯಾಕೆ ಪ್ರತಿ ಸಲ ಕರೆಯಬೇಕು?

ಅವಳು ನನ್ನ ಕ್ಲಾಸ್‌ಮೇಟ್. ಜೀವನದಲ್ಲಿ ತುಂಬಾ ನೊಂದಿದ್ದಾಳೆ. ತಾಯಿ, ಅಣ್ಣ ಇದ್ದಾಗ ಅವರ ಮನೆಯಲ್ಲೇ ಹಬ್ಬ ಮಾಡ್ತಿದ್ರು. ಅಣ್ಣ ಮದುವೆಯಾಗಿ ಅಮೆರಿಕಕ್ಕೆ ಹೋದ. ತಾಯಿ ಹೋಗಿ ಬಿಟ್ರು.

ಒಂಟಿಯಾಗಿ ಯಾಕಿರಬೇಕು? ಮದುವೆ ಆಗಕ್ಕೆ ಹೇಳು.

ಅವಳು ಒಂದು ಹುಡುಗನ್ನ ಪ್ರೀತಿಸಿದ್ದಳು. ಇಬ್ಬರೂ ಮದುವೆಯಾಗಬೇಕೂಂತಿದ್ರು. ಆದರೆ ಅವನು ಶ್ರೀಮಂತ ಹುಡುಗಿ ಸಿಕ್ಕಿದಳೂಂತ ಕೈಬಿಟ್ಟ.

ಬೃಂದಾ, ನಿನಗೆ ಅವಳ ಬಗ್ಗೆ ಸಾಫ್ಟ್ ಕಾರ್ನರ್ ಇರಬಹುದು. ಆದರೆ ನಮಗೆ ಯಾಕೆ ಶಿಕ್ಷೆ? ನನ್ನ ಮನೆಯಲ್ಲೇ ನಾನು ಅಪರಿಚಿತ ಅನ್ನಿಸಿಬಿಡ್ತಿದೆ.

ಯಾಕೆ?

ನಿನ್ನ ಫ್ರೆಂಡ್ ನಿನಗೆ ಸಹಾಯ ಮಾಡ್ತಾಳಾ? ಅಡುಗೆ ಮನೆ ಕಟ್ಟೆ ಮೇಲೆ ಪ್ರತಿಷ್ಠಾಪನೆಯಾಗಿ ನೀ ಮಾಡಿದ್ದೆಲ್ಲಾ ರುಚಿ ನೋಡ್ತಾ ಕೂತಿರ್ತಾಳೆ. ನಾನು

